# ಮತ್ತೆ ಮೇಲೇಳುತ್ತೇನೆ

ನಮ್ಮ ಸಾಲುಮರದ ತಿಮ್ಮಕ್ಕ ಭಾವನಾತ್ಮಕ ನೆಲೆಗಟ್ಟಿನಲ್ಲಿ ಮಾಡಿದ ಮರ ಬೆಳೆಸುವ ಕೆಲಸವನ್ನು ಬೌದ್ಧಿಕ ಆಂದೋಲನವನ್ನಾಗಿ ರೂಪಿಸಿದವರು ವಂಗಾರಿ ಮಾಥಾಯ್. ಕೀನ್ಯಾದ ಈ ಹೆಣ್ಣುಮಗಳು ಬೆಂಕಿಯಲ್ಲಿ ಅರಳಿದ ಹೂವು. ಸಂಘರ್ಷಗಳ ಹಾದಿಯಲ್ಲಿ ರೂಪುಗೊಂಡ ಗಟ್ಟಿಗಿತ್ತಿ. ತನ್ನ ನೆಲ–ಸಮುದಾಯಕ್ಕೆ ಅಂತರ್ಜಲದ ರೂಪದಲ್ಲಿ ಪರಿಣಮಿಸಿದವರು. ಪರಿಸರ ಸಂರಕ್ಷಣೆಯ ಕೆಲಸಗಳಿಗಾಗಿ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಪಾತ್ರರಾದ ಸಾಧಕಿ.




ಗಿಡಗಳನ್ನು ನೆಟ್ಟು ಬೆಳೆಸುವುದರಲ್ಲಿ ಹೆಣ್ಣು ಮಕ್ಕಳನ್ನು ತೊಡಗಿಸುವ ಮೂಲಕ ಅವರ ಜೀವನದ ಗುಣಮಟ್ಟವನ್ನು ಸುಧಾರಿಸುವ ವಿಶಿಷ್ಟ ಪ್ರಯತ್ನ ಮಾಥಾಯ್ ಅವರದು. 'ಗ್ರೀನ್ ಬೆಲ್ಟ್ ಮೂವ್‌ಮೆಂಟ್' ಹೆಸರಿನಲ್ಲಿ ವಿಶ್ವಪ್ರಸಿದ್ಧಿ ಪಡೆದ ಆಂದೋಲನದಲ್ಲಿ ತೊಡಗಿರುವ ಹೆಣ್ಣುಮಕ್ಕಳು ಎರಡು ಕೋಟಿಗೂ ಹೆಚ್ಚು ಗಿಡಮರಗಳನ್ನು ಕೀನ್ಯಾದಲ್ಲಿ ಬೆಳೆಸಿದ್ದಾರೆ. ತೋಟ, ಶಾಲೆಗಳ ಅಂಗಳ, ಚರ್ಚುಗಳ ಆವರಣಗಳು ಸೇರಿದಂತೆ ಕೀನ್ಯಾದುದ್ದಕ್ಕೂ ಬೆಳೆದುನಿಂತಿರುವ ಮರಗಿಡಗಳು ಮಾಥಾಯ್ ಅವರ ಚಿಗುರಿದ ಕನಸುಗಳಂತೆ ಕಾಣಿಸುತ್ತಿವೆ. ಈ ಹಸಿರು ಚಳವಳಿಯ ಮೂಲಕ ಹೆಣ್ಣುಮಕ್ಕಳನ್ನು ಮುಖ್ಯವಾಹಿನಿಯ ಭಾಗವಾಗಿಸಿದ ಅಗ್ಗಳಿಕೆ ಈ ನಾಯಕಿಯದು. ಸಂಸದೆಯಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿರುವ ಅವರು, ಪರಿಸರವಾದಿಯಾಗಿ ಮಾತ್ರವಲ್ಲದೆ ಮಾನವತಾವಾದಿಯಾಗಿಯೂ ಇತಿಹಾಸದಲ್ಲಿ ಉಳಿಯುವಂತಹವರು. ಎಲ್ಲ ಕಾಲದ, ಎಲ್ಲ ದೇಶ–ಭಾಷೆಗಳ ಹೆಣ್ಣುಮಕ್ಕಳಿಗೂ ಪಥ್ಯವಾಗಬಲ್ಲ ವ್ಯಕ್ತಿತ್ವದ ವಂಗಾರಿ ಮಾಥಾಯ್ ಅವರ ಆತ್ಮಕಥನವನ್ನು 'ಮತ್ತೆ ಮೇಲೇಳುತ್ತೇನೆ' ಹೆಸರಿನಲ್ಲಿ ಎಂ.ಆರ್. ಕಮಲ ಕನ್ನಡಕ್ಕೆ ತಂದಿದ್ದಾರೆ. ಕಮಲಾ ಅವರು ಕವಯಿತ್ರಿಯಾಗಿ ಸಹೃದಯರಿಗೆ ಹೆಚ್ಚು ಪರಿಚಿತರು. ಆಫ್ರಿಕನ್, ಆಫ್ರಿಕನ್–ಅಮೆರಿಕನ್ ಸಾಹಿತ್ಯದ ಅನುವಾದಗಳ ಮೂಲಕವೂ ಪ್ರಸಿದ್ಧರು. ಈ ಅನುವಾದ ಬದ್ಧತೆಯ ಮುಂದುವರಿಕೆಯ ರೂಪದಲ್ಲಿ 'ಮತ್ತೆ ಮೇಲೇಳುತ್ತೇನೆ' – ಬದುಕಿನ ಪುಟಗಳ ಸಂಚಯ ಕೃತಿಯನ್ನು ಗುರ್ತಿಸಬಹುದು.

'ಮತ್ತೆ ಮೇಲೇಳುತ್ತೇನೆ' ಎನ್ನುವ ಶೀರ್ಷಿಕೆ ಮಾಥಾಯ್ ಬದುಕಿನ ಸಾರ್ಥಕತೆಯನ್ನು, ಸಿದ್ಧಿಯನ್ನು ಧ್ವನಿಸುವುದರ ಜೊತೆಗೆ, ಸಮಾಜ ನಿರಂತರವಾಗಿ ಒಡ್ಡುವ ಪ್ರತಿಕೂಲ ಸನ್ನಿವೇಶಗಳ ನಡುವೆಯೂ ಮತ್ತೆ ಮತ್ತೆ ಪುಟಿದೇಳುವ ಹೆಣ್ಣಿನ ಧೀಶಕ್ತಿಯನ್ನು ಧ್ವನಿಸುವಂತಿದೆ.

ಮಾಥಾಯ್ ಅವರ ಮಾತುಗಳ ರೂಪದಲ್ಲಿರುವ ಈ ಜೀವನ ಕಥನ, ಅಸಾಧಾರಣ ವ್ಯಕ್ತಿತ್ವವೊಂದರ ಬದುಕು–ಸಾಧನೆಯನ್ನು ಸಹೃದಯರ ಗಮನಕ್ಕೆ ತರುತ್ತಿದೆ. ಮಾಥಾಯ್ ಅವರ ಹುಟ್ಟು, ಬಾಲ್ಯ, ಶಿಕ್ಷಣದಿಂದ ಹಿಡಿದು ರಾಜಕೀಯ ಮೊಗಸಾಲೆಯಲ್ಲಿ ಅವರು ಅಸ್ತಿತ್ವ ಕಂಡುಕೊಂಡ ಘಟನೆಗಳವರೆಗೆ ಹರಡಿಕೊಂಡಿರುವ ಈ ಸ್ಮೃತಿಗಳು ಮಾಥಾಯ್ ಅವರ ಬದುಕಿನ ಕಥನವಾಗಿರುವಂತೆಯೇ, ಕೀನ್ಯಾದ ಸಾಮಾಜಿಕ–ಸಾಂಸ್ಕೃತಿಕ ಹಾಗೂ ರಾಜಕಾರಣದ ಸಂಕ್ಷಿಪ್ತ ನೋಟವನ್ನೂ ಪರಿಚಯಿಸುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಸಮಾಜದ ವಿವಿಧ ಕ್ಷೇತ್ರಗಳಿಗೆ ಸೇರಿದ ಸಾಧಕಿಯರ ಬದುಕಿನ ಕಥನಗಳು ಕನ್ನಡದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಪ್ರಕಟಗೊಳ್ಳುತ್ತಿವೆ, ಓದುಗರ ಗಮನಸೆಳೆಯುತ್ತಿವೆ. ಈ ಕಥನಗಳ ಸಾಲಿಗೆ 'ಮತ್ತೆ ಮೇಲೇಳುತ್ತೇನೆ' ಅರ್ಥಪೂರ್ಣ ಸೇರ್ಪಡೆ.

**ಮತ್ತೆ ಮೇಲೇಳುತ್ತೇನೆ; ಲೇ: ಎಂ.ಆರ್. ಕಮಲ; ಪು: 272; ಬೆ: ರೂ. 325; ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು. ಫೋನ್: 9448676770**